



ಅವರು ತೇಲಾಡುತ್ತಿದ್ದಾರೆ.

ನಟ ಚುಂಕಿ ಪಾಂಡೆ ಮಗಳಾದ ಅನನ್ಯಾ, 2019ರಲ್ಲಿ ತೆರೆಕಂಡ 'ಸ್ಟೂಡೆಂಟ್ ಆಫ್ ದಿ ಇಯರ್ 2' ಸಿನಿಮಾದ ಮೂಲಕ ಚಿತ್ರಬದುಕಿಗೆ ಅಡಿಯಿಟ್ಟವರು. ಅದೇ ವರ್ಷ ಅವರ ಇನ್ನೊಂದು ಸಿನಿಮಾ 'ಪತಿ ಪತ್ನಿ ಔರ್ ವೋ' ಕೂಡ ಬಿಡುಗಡೆಯಾಗಿತ್ತು. ಒಂದು ರೊಮ್ಯಾಂಟಿಕ್ ಲವ್ ಸ್ಟೋರಿ ಮತ್ತು ಇನ್ನೊಂದು ಹಾಸ್ಯಪ್ರಧಾನ ಸಿನಿಮಾಗಳಲ್ಲಿ ನಟಿಸಿ ಸೈ ಅನಿಸಿಕೊಂಡಿರುವ ಇವರಿಗೆ ಈಗಷ್ಟೇ ಅವಕಾಶಗಳ ಬಾಗಿಲು ತೆರೆದುಕೊಳ್ಳುತ್ತಿದೆ.

ಹೆಸರೇ ಸೂಚಿಸುವ ಹಾಗೆ ಇದು ಪಕ್ಕಾ ಆ್ಯಕ್ಷನ್ ಪ್ರಧಾನ ಸಿನಿಮಾ. ಇದುವರೆಗೆ ವಿಜಯ್ ದೇವರಕೊಂಡ ಗೆದ್ದಿದ್ದು ಪ್ರೇಮಕಥೆಗಳ ಮೂಲಕವೇ. ಹಿಂದಿಯ ಹೊಸ ಪ್ರೇಕ್ಷಕವರ್ಗಕ್ಕೆ ಇವರು ಫೈಟರ್ ಆಗಿ ಇಷ್ಟವಾಗುತ್ತಾರಾ? ದಕ್ಷಿಣ ಭಾರತದ ಸ್ಟಾರ್ ಒಬ್ಬ ಬಾಲಿವುಡ್‌ನಲ್ಲಿ ಗಟ್ಟಿಯಾಗಿ ನೆಲೆನಿಲ್ಲಲು ಸಾಧ್ಯವಾಗುತ್ತದೆಯಾ ಎಂಬೆಲ್ಲ ಪ್ರಶ್ನೆಗಳಿಗೆ ಕಾಲವೇ ಉತ್ತರಿಸಬೇಕು.

ಸದ್ಯಕ್ಕೆ ಅನನ್ಯಾ ಪಾಂಡೆ ಇಶಾನ್ ಕಟ್ಟರ್ ಅವರ 'ಖಾಲಿ ಪೀಲಿ' ಸಿನಿಮಾ ಚಿತ್ರೀಕರಣದಲ್ಲಿ ಬ್ಯುಸಿ ಇದ್ದಾರೆ. ನಂತರ ಅವರು ಶಕುನ್ ಬಾತ್ರ ಅವರ ಇನ್ನೂ ಹೆಸರಿಡದ ಒಂದು ಸಿನಿಮಾದಲ್ಲಿ ದೀಪಿಕಾ ಪಡುಕೋಣೆ ಅವರ ಜೊತೆಗೂ ಕಾಣಿಸಿಕೊಳ್ಳಲಿದ್ದಾರೆ. ಇವುಗಳ ನಡುವೆಯೇ 'ಫೈಟರ್'ನಲ್ಲಿ ಯಶಸ್ಸಿನ ಸಿಹಿ ಉಣ್ಣುವ ಕನಸೂ ಅವರಲ್ಲಿದೆ.

■ ಮಾಂಟೊ



# ದೇವಗನ್ ಸೆಂಚುರಿ

ಅಜಯ್ ದೇವಗನ್ ಬಾಲಿವುಡ್‌ನಲ್ಲಿ ತನ್ನದೇ ಆದ ಅಭಿಮಾನಿಗಳನ್ನು ಹೊಂದಿರುವ ನಟ. ಆ್ಯಕ್ಷನ್ ಮತ್ತು ಕಾಮಿಡಿ ಎರಡಕ್ಕೂ ಸೈ ಎನ್ನುತ್ತಿರುವ ನಟ. ಇದೀಗ 100ನೇ ಸಿನಿಮಾ ಮೈಲಿಗಲ್ಲು ದಾಟಿದ್ದು ಬಾಲಿವುಡ್‌ನಲ್ಲಿ ಎಲ್ಲರಿಗೂ ಅಚ್ಚರಿಯ ವಿಷಯ. 50ರ ಹರೆಯದಲ್ಲೂ ಈತನ ನಾಗಾಲೋಟ ಮುಂದುವರಿದಿದೆ. 'ತಾನ್ಹಾಜಿ' ಬಾಕ್ಸ್‌ಆಫೀಸ್‌ನಲ್ಲಿ ಅತ್ಯುತ್ತಮ ಕಲೆಕ್ಷನ್ ಸಾಧಿಸಿದ್ದರ ಪೂರ್ತಿ ಕ್ರೆಡಿಟ್ ಅಜಯ್‌ಗೇ ಸಲ್ಲುತ್ತದೆ ಎನ್ನುವುದು ಬಾಲಿವುಡ್ ಪಂಡಿತರ ಮಾತು.

2020ರಲ್ಲಿ ಅಜಯ್‌ನ ಇನ್ನಷ್ಟು ಚಿತ್ರಗಳು ಸಾಲುಗಟ್ಟಿವೆ. ಹನ್ಸಲ್ ಮೆಹ್ತಾ ನಿರ್ದೇಶನದ 'ಥಲಾಂಗ್', ರೋಹಿತ್ ಶೆಟ್ಟಿಯ 'ಸೂರ್ಯವಂಶಿ', ಕೂಕೀ ಗುಲಾಟಿಯ 'ದಿ ಬಿಗ್ ಬುಲ್', ರಾಜಮೌಳಿಯ 'ಆರ್‌ಆರ್‌ಆರ್', 'ಭುಜ್ ದಿ ಪ್ರೈಡ್ ಆಫ್ ಇಂಡಿಯಾ', 'ಚಾಣಕ್ಯ' ಸಹಿತ ಒಟ್ಟು ಎಂಟು ಚಿತ್ರಗಳು ಈ ವರ್ಷವೇ ಬಿಡುಗಡೆ ಕಾಣಲಿವೆ! 2021ರಲ್ಲಿ ಬಿಡುಗಡೆಯಾಗಲಿರುವ ನಾಲ್ಕು ಚಿತ್ರಗಳಿಗೂ ಈತ ಸಹಿ ಹಾಕಿದ್ದಾನೆ.

'ಫೂಲ್ ಔರ್ ಕಾಂಟೆ' ಚಿತ್ರದಲ್ಲಿ ಮೊತ್ತಮೊದಲು ನಟಿಸಿದಾಗ ಈತನ ಮುಖ ನೋಡಿ ಹೀರೊ ಆಗಲು ಈತ ಲಾಯಕ್ಕಲ್ಲ ಎಂದವರೇ ಹೆಚ್ಚು. ಅಪ್ಪ ವೀರೂ ದೇವಗನ್ ಸ್ಟಂಟ್ ಮಾಸ್ಟರ್ ಆಗಿದ್ದರಿಂದ ಮೊದಲ ಚಿತ್ರದಲ್ಲಿ ಸ್ಟಂಟ್‌ಗಳೇ ಕೈಹಿಡಿದವು. 'ನಾನು ಹೀರೊ ಆಗುವಷ್ಟು ಸ್ಫುರದ್ರೂಪಿ ಅಲ್ಲ ಎನ್ನುವುದು ನನಗೆ ಗೊತ್ತು. ಇಷ್ಟು ವರ್ಷ ಬಾಲಿವುಡ್‌ನಲ್ಲಿ ಬಾಳಿಕೆ ಬಂದದ್ದೇ ಹೆಚ್ಚು' ಎಂದು ಇತ್ತೀಚಿನ ಸಂದರ್ಶನವೊಂದರಲ್ಲಿ ಅಜಯ್ ತನ್ನನ್ನು ತಾನೇ ಲೇವಡಿ ಮಾಡಿಕೊಂಡಿದ್ದಾನೆ. ಸೂಪರ್‌ಸ್ಟಾರ್ ಪಟ್ಟವೇರಿದ್ದರೂ ಅಜಯ್‌ಗೆ ಸ್ವಲ್ಪವೂ ಗರ್ವವಿಲ್ಲ ಎನ್ನುವುದು ಆತನನ್ನು ಬಲ್ಲ ಎಲ್ಲರ ಮಾತು.

■ ಬಿಂದು